# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189,ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 13.01.2022 ರಂದು ಬೆಳಗ್ಗೆ 11:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ ನೋಡಲ್ ಅಧಿಕಾರಿ, ಕಾರ್ಯದರ್ಶಿ/ಸಹಾಯಕ ಅಭಿಯಂತರರು, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರುಗಳು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ / ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 189, ಹೊಂಗಸಂದ್ರ |
| 3 | ಶ್ರೀ ನಾಗಭೂಷಣ.ಆರ್ | ಸದ್ಯಸರು |
| 4 | ಶ್ರೀ ರುಪೇಶ್ | ಸದ್ಯಸರು |
| 5 | ಶ್ರೀ ಮುನಿರಾಜು | ಸದ್ಯಸರು |
| 6 | ಶ್ರೀ ಕೋದಂಡ ರಾಮ ರೆಡ್ಡಿ | ಸದಸ್ಯರು |
| 7 | ಶ್ರೀ ಗಿರೀಶ್.ಎಸ್ | ಸದಸ್ಯರು |
| 8 | ಶ್ರೀ ಮುನಿರಾಜು | ಸದ್ಯಸರು |
| 9 | ಶ್ರೀ ಕುಮಾರ್ | ಸದ್ಯಸರು |
| 10 | ಶ್ರೀ ಡಾ॥ ರಂಗರಾಜು ಬಿ. | ಪ್ರಾಥಮಿಕ ಆರೋಗ್ಯ ಕೇಂದ್ರ. ವಾ.ಸಂ.189 |
| 11 | ಶ್ರೀ ಸಿದ್ದರಾಜು | ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎ.ಎಸ್.ಐ) ಬೇಗೂರು ಪೋಲಿಸ್ ಠಾಣೆ. |
| 12 | ಶ್ರೀ ಶಿವಕುಮಾರ್ ಹೆಚ್.ಎ | ಬೇಗೂರು ಪೋಲಿಸ್ ಠಾಣೆ |
| 13 | ಶ್ರೀ ಹೆಚ್.ಆರ್ ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ) |
| 14 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು.ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 15 | ಶ್ರೀ ನಾರಾಯಣ ಸ್ವಾಮಿ | ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-19 |
| 16 | ಶ್ರೀ ಹೆಚ್. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ. 189 |
| 17 | ಶ್ರೀ ವಿನೋದ್ ಕುಮಾರ್.ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾ.ಸಂ. 189 |
| 18 | ಶ್ರೀ ಕುಮಾರ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 19 | ಶ್ರೀ ರಾಮಕೃಷ್ಣ.ಆರ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 20 | ಶ್ರೀ ವಿನೋದ್ ಕುಮಾರ್ | ಮಾರ್ಷ್‌ಲ್ |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿಲ್ಲಾಗಿ ಸಭೆಯನ್ನು ಪ್ರಾರಂಭಿಸಿದರು

**(ಪು.ತಿ.ನೋ)**

Scanned with

- **ಆರೋಗ್ಯ ಇಲಾಖೆ (ಕೋವಿಡ್-19) :-**

1. ಡಾ. ರಂಗರಾಜನ್ ಬಿ. ರವರು ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 18.12.2021 ರಿಂದ 13.01.2022 ರವರಿಗೆ ಒಟ್ಟು 230 ಕೋವಿಡ್ ಪ್ರಕರಣಗಳು ವರದಿಯಾಗಿರುತ್ತದೆ. ಇದರಲ್ಲಿ 6 ಕೋವಿಡ್ ಪ್ರಕರಣಗಳು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, 02 ಕೋವಿಡ್ ಪ್ರಕರಣಗಳು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ಹಾಗೂ ಉಳಿದ 222 ಕೋವಿಡ್ ಪ್ರಕರಣಗಳು 07 ದಿನಗಳವರಿಗೂ HI's ಒಳಪಡಿಸಲಾಗಿರುತ್ತಾರೆ ಎಂದು ಸಭೆಗೆ ತಿಳಿಸಿದರು.
2. ಡಾ|| ರಂಗರಾಜನ್.ಬಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ವಿವರಿಸುತ್ತಾ ದಿನಾಂಕ: 18.12.2021 ರಿಂದ 13.01.2022 ರವರೆಗೆ

   Covishield – ಒಟ್ಟು 816 1ನೇ ಡೋಸ್ ಲಸಿಕೆಗಳನ್ನು ನೀಡಲಾಗಿರುತ್ತದೆ
   ಒಟ್ಟು 3057 2ನೇ ಡೋಸ್ ಲಸಿಕೆಗಳನ್ನು ನೀಡಲಾಗಿರುತ್ತದೆ
   Covaxine– ಒಟ್ಟು 698 1ನೇ ಡೋಸ್ ಲಸಿಕೆಗಳನ್ನು ನೀಡಲಾಗಿರುತ್ತದೆ
   ಒಟ್ಟು 677 2ನೇ ಡೋಸ್ ಲಸಿಕೆಗಳನ್ನು ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು
3. ರಾಜ್ಯದಾದ್ಯಂತ ದಿನಾಂಕ: 03.01.2022 ರಿಂದ 15-18 ವರ್ಷ ವಯಸ್ಸಿನ ಮಕ್ಕಳಿಗೆ ಲಸಿಕೆ ಅಭಿಯಾನವನ್ನು ಸರ್ಕಾರ ಪ್ರಾರಂಭಿಸಿದ್ದು, ಅದರಂತೆ ಈ ವಾರ್ಡ್‌ನಲ್ಲಿ ಮಕ್ಕಳಿಗೆ ಶಾಲೆ/ಕಾಲೇಜು ಮತ್ತು ಲಸಿಕೆ ಕೇಂದ್ರಗಳಲ್ಲಿ ಲಸಿಕೆ ಪಡೆಯುವ ಮಕ್ಕಳ ತಂದೆ/ತಾಯಿಯರ, ಪೋಷಕರ, ಶಾಲೆ ಶಿಕ್ಷಕರ, ಶಾಲೆ ಮುಖ್ಯೋಪಾಧ್ಯಯರ ಮೊಬೈಲ್ ಸಂಖ್ಯೆಯನ್ನು ಬಳಸಿ ಲಸಿಕೆಯನ್ನು ಉಚಿತವಾಗಿ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ನಂಬರ್ ಬಳಸಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಾಣಿ ಮಾಡಲಾಗುತ್ತಿರುವುದಾಗಿ ಡಾ|| ರಂಗರಾಜನ್.ಬಿ ರವರು ಸಭೆಗೆ ತಿಳಿಸಿದ್ದರು.
4. ದಿನಾಂಕ: 10.01.2022 ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟ ಅಸ್ವಸ್ಥತೆ ಹೊಂದಿರುವ ಫಲಾನುಭವಿಗಳಿಗೆ ಕೋವಿಡ್-19 ಮುನ್ನೆಚ್ಚರಿಕೆ ಲಸಿಕಾ ಡೋಸ್ ನೀಡುವ ಕುರಿತು ಸರ್ಕಾರದ ಆದೇಶದಂತೆ ಹಾಗೂ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ (NTAGI) ಶಿಫಾರಸ್ಸಿನಂತೆ ಈಗಾಗಲೇ 2 ಡೋಸ್ ಲಸಿಕೆ ಪಡೆದ 09 ತಿಂಗಳ (39 ವಾರಗಳ) ನಂತರ ಮುನ್ನೆಚ್ಚರಿಕೆ ಲಸಿಕಾ ಡೋಸ್ ಪಡೆಯಲು ಅರ್ಹರಿರುವ ಫಲಾನುಭವಿಗಳಿಗೆ ಲಸಿಕೆ ಈ ವಾರ್ಡ್‌ನಲ್ಲಿ ಪ್ರತಿ ಶನಿವಾರ ನೀಡಲಾಗುತ್ತಿರುವುದಾಗಿ ಹಾಗೂ ಇದುವರೆಗೂ ಒಟ್ಟು 12 ಫಲಾನುಭವಿಗಳು ಮುನ್ನೆಚ್ಚರಿಕೆ ಲಸಿಕೆಗಳನ್ನು ಪಡೆದುಕೊಂಡಿರುವ ಬಗ್ಗೆ ಸಭೆಗೆ ಡಾ|| ರಂಗರಾಜನ್.ಬಿ ರವರು ಸಭೆಗೆ ತಿಳಿಸಿದ್ದರು

- **ಕಂದಾಯ:-**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಕಂದಾಯ ವಸೂಲಾತಿಯಾಗಿರುತ್ತದೆ ಎಂದು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಕುಮಾರ್ ಕಂದಾಯ ನಿರೀಕ್ಷಕರು, ಹೊಂಗಸಂದ್ರ ರವರು ಒಟ್ಟಾರೆಯಾಗಿ ಇಲ್ಲಿಯವರೆಗೂ.

| | | | | | |
|---|---|---|---|---|---|
| Demand - | 16.76 Lakhs | Collection - | 09.26 Lakhs | Outstanding - | 5.99 Lakhs |
| Arrears - | 6.16 Lakhs | Arrears - | 1.97 Lakhs | Arrears - | 3.76 Lakhs |
| Current year - | 10.60 Lakhs | Current year - | 7.29 Lakhs | Current year - | 2.23 Lakhs |

- **ಕಾಮಗಾರಿ**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದ ಪಕ್ಕದಲ್ಲಿರುವ ಸರ್ಕಾರಿ ಶಾಲೆಯ ಅಭಿವೃದ್ದಿಗಾಗಿ ಈಗಾಗಲೇ ಹಲವಾರು ವಾರ್ಡ್ ಸಮಿತಿ ಸಭೆಗಳಲ್ಲಿ ಪ್ರಸ್ತಾಪಿಸಿದ್ದು 02 ವರ್ಷದಿಂದ ಟೆಂಡರ್ ಕರೆದಿರುವ ಬಗ್ಗೆ ಅಧಿಕಾರಿಗಳು, ಮೇಲಧಿಕಾರಿಗಳಿಗೆ ಅನುಮೋದನೆ ದೊರೆತಿಲ್ಲವೆಂದು ಉತ್ತರ ನೀಡುತ್ತಿರುವ ಬಗ್ಗೆ ಸಭೆಯಲ್ಲಿ ಸದ್ಯಸರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸ.ಅ ಬಿಬಿಎಂಪಿ ರವರು ಕಡತವನ್ನು ಈಗಾಗಲೇ ಅನುಮೋದನೆಗಾಗಿ ಕೇಂದ್ರ ಕಛೇರಿಗೆ ರವನಿಸಲಾಗಿದ್ದು, ಅಲ್ಲಿಂದ ಅನುಮೋದನೆ ನಿರೀಕ್ಷಿಸಲಾಗಿದ್ದು ಅನುಮೋದನೆ ದೊರೆತ ನಂತರ ಕಾಮಗಾರಿ ಕೈಗೊಳಲಾಗುವುದೆಂದು ಸಭೆಗೆ ತಿಳಿಸಿದರು.

(ಪು.ತಿ.ನೋ)

Scanned with

- ಹಿಂದಿನ ಸಭೆಯ ದಿನಾಂಕ: 18.12.2021 ರಂದು ಚರ್ಚಿಸಿರುವ ವಿಷಯದ ಬಗ್ಗೆ, ಇಂದಿನ ಸಭೆಯಲ್ಲಿ ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಕೆಲವು ಕಡೆ ಸಿಸಿ ಕ್ಯಾಮಾರಗಳನ್ನು ಅಳವಡಿಸಿದ್ದು, ಸರಿಯಾಗಿ ನಿರ್ವಹಿಸುತ್ತಿಲ್ಲ/ ಚಾಲನೆಯಲ್ಲಿರುವುದಿಲ್ಲವೆಂದು ಸದಸ್ಯರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ಕೆಲವು ಕಡೆ Short circuit ಆಗಿ UPS ಇಲ್ಲದಿರುವುದರಿಂದ ಹಾಗೂ ಸಿಸಿ ಕ್ಯಾಮಾರಗಳನ್ನು ಪೋಲಿಸ್ ಇಲಾಖೆಯವರ ವಶಕ್ಕೆ ನೀಡಿದ್ದು ಸರಿಯಾಗಿ ನಿರ್ವಹಿಸಲಾಗುತ್ತಿಲ್ಲವಾದ್ದರಿಂದ ಚಾಲನೆಯಲ್ಲಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

- <u>ಬೆಸ್ಕಾಂ:-</u>

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಬೇಗೂರು ರಸ್ತೆ ವಿವೇಕಾನಂದ ನಗರ ಅಡ್ಡ ರಸ್ತೆ, 2, 3 & 4 ರಲ್ಲಿ ABC Cable ಹಾಕುವ ಬಗ್ಗೆ ಸುಮಾರು 06 ತಿಂಗಳಿಂದ ಸಾಕಷ್ಟು ಬಾರಿ ಬೆಸ್ಕಾಂ ಇಲಾಖೆಯಲ್ಲಿ ಹಾಗೂ ವಾರ್ಡ್ ಸಮಿತಿ ಸಭೆಯಲ್ಲಿ ಪ್ರಾಸ್ತಾಪಿಸಿ ದೂರು ನೀಡಿದರೂ ಇಲ್ಲಿಯವರಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ಶ್ರೀ ಮುನಿರಾಜು ಮತ್ತು ಇತರೆ ಸದ್ಯಸರು ಸಭೆಯಲ್ಲಿ ಆಕ್ಷೇಪಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯ ಪ್ರದೇಶಗಳಲ್ಲಿ ಬೆಸ್ಕಾಂ ಇಲಾಖೆಯವರು Cable ಕಾಮಗಾರಿಗಳನ್ನು ಕೈಗೆತಿಕೊಂಡು ರಸ್ತೆಗಳನ್ನು ಹಾಗೆದ್ದು ವೆಟ್‌ಮಿಕ್ಸ್ ಹಾಕದಂತೆ Cable ಗಳನ್ನು ಅದೇ ಸ್ಥಳದಲ್ಲಿ ಬಿಟ್ಟಿದ್ದು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರರಿಗೆ ಓಡಾಡಲು ಕಷ್ಟವಾಗುತ್ತಿದ್ದು ಶೀಘ್ರದಲೇ ಕ್ರಮವಹಿಸಲು ಸದ್ಯಸರು ಸಭೆಯಲ್ಲಿ ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿರವರು ರಸ್ತೆಗಳನ್ನು ಅಗೆದಿರುವುದಕ್ಕೆ ಬಿಬಿಎಂಪಿ ವತಿಯಿಂದ ಅನುಮತಿಯನ್ನು ಪಡೆದುಕೊಂಡಿರುವ ಬಗ್ಗೆ ಕಿರಿಯ ಅಭಿಯಂತರರು ಬೆಸ್ಕಾಂ, ಬಿಳೇಕಹಳ್ಳಿ ರವರಿಗೆ ಸೂಚಿಸಿದ್ದು ಈ ಬಗ್ಗೆ ಅನುಮತಿಯನ್ನು ಪಡೆದುಕೊಂಡಿರುವುದಾಗಿ ಸಭೆಗೆ ತಿಳಿಸಿದರು. ಅಧ್ಯಕ್ಷರು/ನೋಡಲ್ ಅಧಿಕಾರಿರವರು ಮಾತನಾಡುತ್ತಾ ಸಭೆಯಲ್ಲಿ ಹಾಜರಿದ್ದ ಶ್ರೀ ಸಂತೋಷ ಪ್ರಸಾದ ಸಹಾಯಕ ಅಭಿಯಂತರರು, ಬಿಡಬ್ಲೂಎಸ್‌ಎಸ್‌ಬಿ ಹಾಗೂ ಸಹಾಯಕ ಅಭಿಯಂತರರು, ಬಿಬಿಎಂಪಿ ರವರಿಗೆ ಸಾರ್ವಜನಿಕರ ಆಸ್ತಿಗಳು ಹಾನಿಯಾಗುತ್ತಿದ್ದು 3 ಇಲಾಖೆಯವರ ಸಹಕಾರದೊಂದಿಗೆ ಹೊಂಗಸಂದ್ರ ವಾರ್ಡ್‌ನಲ್ಲಿ ಬರುವ ರಸ್ತೆಗಳಿಗೆ ಹಾನಿಯಾಗದಂತೆ ಕ್ರಮವಹಿಸಲು ಸೂಚಿಸಿದರು.

- <u>**ಮಳೆ ನೀರುಗಾಲುವೆ:-**</u>

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಆಕ್ಸ್‌ಫರ್ಡ್ ಕಾಲೇಜ್ ಹತ್ತಿರ ಸ್ಮಶಾನ ದಲ್ಲಿ ಬೃಹತ್ ನೀರುಗಾಲುವೆ ಚರಂಡಿಯಲ್ಲಿ ಹೂಳೆತ್ತುವ ಬಗ್ಗೆ ಸದಸ್ಯರು ರವರು ಸಭೆಯಲ್ಲಿ ತಿಳಿಸಿದ್ದು, ಅಧ್ಯಕ್ಷರು/ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಬೃಹತ್ ನೀರುಗಾಲುವೆಯ ಚರಂಡಿಯಲ್ಲಿನ ಹೂಳೆತ್ತಲು ಸೂಚಿಸಿದ್ದರು.

- <u>**ಬಿ.ಡಬ್ಲ್ಯೂ.ಎಸ್.ಎಸ್.ಬಿ. -**</u>

1. ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕುಡಿಯುವ ನೀರಿನ & ಒಳಚರಂಡಿ ಸಂಪರ್ಕದ ಸೌಲಭ್ಯವನ್ನು ಪಡೆದುಕೊಂಡಿರುವವರನ್ನು ಸರ್ವೆ ಮಾಡಿ ನೋಟಿಸ್ ಜಾರಿ ಮಾಡಿ ಸಂಪರ್ಕವನ್ನು ಕಡಿತಗೊಳಿಸಲು ಸದ್ಯಸರು ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸಂತೋಷ ಪ್ರಸಾದ ಸಹಾಯಕ ಅಭಿಯಂತರರು, ಬಿಡಬ್ಲೂಎಸ್‌ಎಸ್‌ಬಿ ರವರು ಈಗಾಗಲೇ ಬಿಎಂಟಿಎಫ್ ರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಇಲಾಖೆಯಿಂದ ಸರ್ವೆ ನಡೆಸಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು, ಎಂದು ಸಭೆಗೆ ತಿಳಿಸಿದರು. ಹಾಗೂ ಎಲ್ಲಾ ಸದ್ಯಸರು ರವರು ಮುಖ್ಯ ರಸ್ತೆಗಳಲ್ಲಿ ಇರುವ ಮನೆಗಳಿಗೆ ಬಿಡಬ್ಲೂಎಸ್‌ಎಸ್‌ಬಿ ಅಥವಾ ಬಿಎಂಟಿಎಫ್ ಇಲಾಖೆಗಳಾಗಲೇ ಇದುವರೆಗೂ ನೋಟಿಸ್ ನೀಡದೆ ಕೋರ್ಟ್ ವತಿಯಿಂದ ಸಮನ್ಸ್ ಬಂದಿದ್ದು, ಕೋರ್ಟ್‌ನಲ್ಲಿ ಈಗಾಗಲೇ Bail Warrant ಪಡೆದಿಲ್ಲದಿದ್ದರೆ ಕುಡಿಯುವ ನೀರಿನ & ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಲಾಗುತ್ತಿರುವುದಾಗಿ ಹಾಗೂ ಈ ಬಗ್ಗೆ ಬಿಡಬ್ಲೂಎಸ್‌ಎಸ್‌ಬಿ ಇಲಾಖೆಗಳಿಗೆ ತಿಳಿಸದರೆ ಬೇಜ್ವಾಬ್ದಾರಿಯಾಗಿ ಉತ್ತರ ನೀಡುತ್ತಿರುತ್ತಾರೆ ಎಂದು ಸದ್ಯಸರು ಆಕ್ಷೇಪಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಮ್ಯಾನ್ ಹೋಲ್‌ಗಳು ರಸ್ತೆಗಳಿಂತ ಕೆಳ ಪ್ರದೇಶದಲ್ಲಿದ್ದು, ರಸ್ತೆಯ ಮಟ್ಟಕ್ಕೆ ಎತ್ತರಿಸುವಂತೆ ಸದ್ಯಸರು ಸಭೆಗೆ ತಿಳಿಸಿದರು. ಈ ಬಗ್ಗೆ ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸಂತೋಷ ಪ್ರಸಾದ ಸಹಾಯಕ ಅಭಿಯಂತರರು, ಬಿಡಬ್ಲೂಎಸ್‌ಎಸ್‌ಬಿ ರವರು ಸ್ಥಳ ಪರಿಶೀಲಿಸಿ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

**(ಮು.ತಿ.ನೋ)**

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 189 ಹಾಗೂ ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

14/11/2022

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with